ಸಂಪುಟ : 8 ಸಂಚಿಕೆ : 252 ಪುಟ : 6 ಬೆಲೆ : 3.00 ಮಂಗಳವಾರ ನವ್ಹಂಬರ್ 14, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 252 Pages : 6 Price : 3.00 Tuesday November 14, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು

ದೀಪಾವಳಿ ಎಂದರೆ ನಮ್ಮ ಬದುಕಿನ ಕತ್ತಲೆಯನ್ನು ಕಳೆದು ಬೆಳಕಿನ ದಾರಿ ತೋರಿಸುವ ಸಂಭ್ರಮದ ಹಬ್ಬ. ಒಂದು ದೀಪ ತಾನು ಸುಟ್ಟುಕೊಳ್ಳುತ್ತ ಲಕ್ಷಾಂತರ ಜ್ಯೋತಿಗಳು ಬೆಳಗುತ್ತವೆ. ಅಂತಹ ಸಾರ್ಥಕ ಬದುಕಿನ ಅಂತಃಸ್ಫುರಣ ನಮ್ಮ-ನಿಮ್ಮೆಲ್ಲರಿಗೂ ಆಗಲಿ ಎಂಬ ಹಾರೈಕೆಯೊಂದಿಗೆ ನಮ್ಮ ಸಮಸ್ತ ಓದುಗರಿಗೆ, ಜಾಹೀರಾತುದಾರರಿಗೆ, ಏಜೆಂಟರಿಗೆ ಹಾಗೂ ಅಭಿಮಾನಿಗಳಿಗೆ ಬೆಳಕಿನ ಹಬ್ಬದ ಹಾರ್ದಿಕ ಶುಭಾಶಯಗಳು.

## ಇಂದು ಕಾರ್ಯಾಲಯಕ್ಕೆ ಬಿಡುವು

ಇಂದು ದೀಪಾವಳಿ ಪಾಡ್ಯ ನಿಮಿತ್ತ ನಮ್ಮ ಕಚೇರಿಗೆ ಬಿಡುವು ಇರುವುದರಿಂದ ನಾಳಿನ ಸಂಚಿಕೆ ಪ್ರಕಟವಾಗುವುದಿಲ್ಲ.

– ಸಂಪಾದಕರು

## ಗದಗ-ಬೆಟಗೇರಿ: ಇಂದಿನ ನೀರು ಪೂರೈಕೆ ವಿವರ

■ **ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದಲ್ಲಿ ನವೆಂಬರ್ 14ರಂದು ನೀರು ಪೂರೈಕೆ ಮಾಡಲಾಗುವ ಸ್ಥಳಗಳ ಮಾಹಿತಿ ಹೀಗಿದೆ.

**ಸ್ಥಳಗಳ ವಿವರ:** ವಾರ್ಡ್ ನಂಬರ್ 1ರಲ್ಲಿ ಎಸ್.ಎಂ. ಕೃಷ್ಣ ನಗರ ಭಾಗ 1, ಮೇಲಿನ ಭಾಗ, ಕೆಳಗಿನ ಭಾಗ, ವಾರ್ಡ್ ನಂ.28ರಲ್ಲಿ ದೇವಗಿರಿ ಮಾಸ್ಟರ್ ಲೈನ್, ನಾಗರಕಟ್ಟೆ ಮಾಸ್ಟರ್, ಜಿಎಸ್ ಪಾಟೀಲ್ ಸಂತೋಷ್ ಕಿರಾಣಿ ಸ್ಟೋರ್, ಅಪಾರ್ಟ್ಮೆಂಟ್ ಲೈನ್, ಎಸ್.ಎಸ್. ಪಾಟೀಲ್ ಅಂಡ್ ಕೊರ್ಲಳ್ಳಿ ಮಲೆನಾಡದವರ ಲೈನ್, ಗವಾಯಿಗಳ ಆಶ್ರಮ ಲೈನ್, ಕಾಗದಗಾರ್ ಲೈನ್, ವಾರ್ಡ್ ನಂ.32 ಕೇಶವ ನಗರ, ಪುಟ್ಟರಾಜನಗರ ವಾರ್ಡ್ ನಂ.5, 6ರಲ್ಲಿ ಗಣೇಶನಗರ 1,2,3,4, ಭಾಗಗಳು, ಶಿವಾಜಿನಗರ 1, 2 ,3 ,4, ಭಾಗಗಳು, ಮಳಲಿ ಅವರ ಲೈನ್, ಪೂಜಾರ ಅವರ ಲೈನ್, ನಾವಳ್ಳಿಯವರ ಲೈನ್‌ಭಾಗಗಳಲ್ಲಿ ನೀರು ಪೂರೈಕೆಯಾಗಲಿದೆ. ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಅಡೆ-ತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜಿಲ್ಲಾ ಉಸ್ತುವಾರಿ ಸಚಿವರಿಂದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ

# ಫಲಾನುಭವಿಗಳು ಸೌಲಭ್ಯದಿಂದ ವಂಚಿತರಾಗದಂತೆ ಕ್ರಮ ವಹಿಸಿ

■ **ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯಲ್ಲಿನ ಹಿರಿಯ ನಾಗರಿಕರು, ಬೀದಿ ಬದಿ ವ್ಯಾಪಾರಸ್ಥರು, ಭಿಕ್ಷುಕರು, ವಿಕಲಚೇತನರು ಸೇರಿದಂತೆ ವಿವಿಧ ಸ್ಥರಗಳಲ್ಲಿ ಸರ್ಕಾರದ ಯೋಜನೆಯ ಸೌಲಭ್ಯ ಪಡೆಯಬಯಸುವ ಅರ್ಹರು ಯೋಜನೆಯ ಸೌಲಭ್ಯಗಳಿಂದ ವಂಚಿತರಾಗದಂತೆ ಆಯಾ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಅವರು ನುಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಂಚ ಗ್ಯಾರಂಟಿಗಳ ಅನುಷ್ಠಾನದಲ್ಲಿ ರಾಜ್ಯದಲ್ಲಿಯೇ ಗದಗ ಜಿಲ್ಲೆ ಪ್ರಥಮ ಸ್ಥಾನದಲ್ಲಿರಬೇಕು. ಅರ್ಹ ಫಲಾನುಭವಿಗಳನ್ನು ಗುರುತಿಸಿ ಯೋಜನೆಯ ಸೌಲಭ್ಯಗಳು ತಲುಪಿಸಲು ಶ್ರಮಿಸಬೇಕು. ಅನುಷ್ಠಾನದಲ್ಲಿ ಇರುವ ತಾಂತ್ರಿಕ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಿ ಪ್ರತಿಯೊಬ್ಬರಿಗೂ ಯೋಜನೆಯ ಲಾಭ ದೊರಕಿಸುವಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದರು.

ಅನ್ನಭಾಗ್ಯ ಯೋಜನೆಯಡಿ ಗದಗ ಜಿಲ್ಲೆಗೆ ನಿಗದಿಪಡಿಸಲಾದ



ಗುರಿಯ ಪೈಕಿ ಶೇ 92ರಷ್ಟು ಗುರಿ ಸಾಧನೆಯಾಗಿದೆ. ವಿವಿಧ ತಾಂತ್ರಿಕ ತೊಂದರೆಗಳಿರುವ 7,565 ಫಲಾನುಭವಿಗಳಿಗೆ ಪ್ರಸಕ್ತ ಮಾಹೆಯಿಂದ ಅನ್ನಭಾಗ್ಯ ಯೋಜನೆಯ ನಗದು ಪಾವತಿಸಲಾಗುವುದು. ಜಿಲ್ಲೆಯ 19,079 ಕಾರ್ಡುದಾರರಿಗೆ ವಿವಿಧ ಕಾರಣಗಳಿಂದ ಹಣ ಪಾವತಿಯಾಗಿಲ್ಲ. ಇದರಲ್ಲಿ ಆಧಾರ್ ನೋಂದಣಿ ಹಾಗೂ ಪಡಿತರ ಚೀಟಿ, ಬ್ಯಾಂಕ್ ಖಾತೆ ಮತ್ತು ಆಧಾರ್ ಕಾರ್ಡನಲ್ಲಿನ ಹೆಸರುಗಳ ವ್ಯತ್ಯಾಸದಿಂದ ಪಾವತಿಯಾಗಿಲ್ಲ ಎಂದು ಆಹಾರ ಇಲಾಖೆಯ ಉಪನಿರ್ದೇಶಕ ಗಂಗಪ್ಪ ಮಾಹಿತಿ ನೀಡಿದರು. ಗೃಹಲಕ್ಷ್ಮೀ ಯೋಜನೆಯಡಿ 2,48,000 ಗುರಿ ಹೊಂದಿದ್ದು 2,18,215 ಫಲಾನುಭವಿಗಳಿಗೆ ಮಂಜೂರಾತಿ ನೀಡಲಾಗಿದೆ. ಫಲಾನುಭವಿಗಳ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್‌ನಲ್ಲಿನ ಹೆಸರು ಹೊಂದಾಣಿಕೆಯಾಗದ ಕಾರಣ ಹೀಗೆ ತಾಂತ್ರಿಕ ತೊಂದರೆಗಳಿಂದ ಬಾಕಿ ಉಳಿದಿರುವ ಫಲಾನುಭವಿಗಳ ಹೆಸರು ನವೀಕರಣ ಆಗಿರುವುದಿಲ್ಲ. ಈ ಬಗ್ಗೆ ಶೀಘ್ರದಲ್ಲಿಯೇ ಕ್ರಮ ವಹಿಸಲಾಗುವುದು. ಗೃಹಲಕ್ಷ್ಮೀಯಡಿ ಫಲಾನುಭವಿಗಳ ಪಾವತಿಯಲ್ಲಿ ರಾಜ್ಯದಲ್ಲಿಯೇ ಗದಗ ಜಿಲ್ಲೆ 3ನೇ ಸ್ಥಾನದಲ್ಲಿದೆ ಎಂದು ಸಭೆಗೆ ಮಾಹಿತಿ ನೀಡಿದರು. ಶಕ್ತಿ ಯೋಜನೆಯಡಿ ಜೂನ್‌ನಿಂದ ಇದುವರೆಗೆ 2.19 ಕೋಟಿ ಮಹಿಳೆಯರು ಪ್ರಯಾಣಿಸಿದ್ದು, 1.53 ಕೋಟಿ ಪುರುಷರು ಪ್ರಯಾಣಿಸಿದ್ದಾರೆ. ಪ್ರತಿ ದಿನ ಸರಾಸರಿ ಪುರುಷ ಪ್ರಯಾಣಿಕರಿಂದ 30 ಲಕ್ಷ ಹಾಗೂ ಮಹಿಳಾ ಪ್ರಯಾಣಿಕರಿಂದ 47 ಲಕ್ಷ ರೂ. ಹೀಗೆ ಒಟ್ಟಾರೆ 77 ಲಕ್ಷ ರೂ. ಆದಾಯ ಪಡೆದಿದೆ ಎಂದು ವಾಕರಸಾ ಸಂಸ್ಥೆಯ ಅಧಿಕಾರಿ ಸಭೆಗೆ ಮಾಹಿತಿ ನೀಡಿದರು. ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ ನಿಗದಿಪಡಿಸಲಾದ ಗುರಿಯಲ್ಲಿ ಶೇ 94 ರಷ್ಟು ಸಾಧನೆಯಾಗಿದೆ. 2,55,933 ಫಲಾನುಭವಿಗಳ ಗುರಿ ಹೊಂದಲಾಗಿದ್ದು 15,605 ಫಲಾನುಭವಿಗಳು ನೋಂದಣಿ ಮಾಡಿಕೊಳ್ಳಬೇಕಿದೆ. ಸೇವಾ ಸಿಂಧು ಪೋರ್ಟಲ್‌ನಲ್ಲಿ 4,722 ಅರ್ಜಿಗಳು ಬಾಕಿ ಇವೆ ಎಂದು ಹೆಸ್ಕಾಂ ಇಲಾಖೆಯ ಅಧಿಕಾರಿ ಸಭೆಗೆ ವಿವರಿಸಿದರು. ಯುವನಿಧಿ ಯೋಜನೆಗೆ ಸಂಬಂಧಿಸಿದಂತೆ 6,115 ವಿದ್ಯಾರ್ಥಿಗಳು ಯೋಜನೆಯ ಫಲಾಕಾಂಕ್ಷಿಗಳಾಗಿದ್ದಾರೆ. ಸರ್ಕಾರದ ಮಾರ್ಗದರ್ಶನದಂತೆ ಯೋಜನೆಯ ಅನುಷ್ಠಾನಗೊಳಿಸಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಿಕಾ ಬಾಜಪೇಯಿ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಉಪವಿಭಾಗಾಧಿಕಾರಿ ಡಾ.ವೆಂಕಟೇಶ ನಾಯ್ಕ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಾರುತಿ ಬ್ಯಾಕೋಡ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ಗಂಗಪ್ಪ, ತಹಸೀಲ್ದಾರ ಶ್ರೀನಿವಾಸಮೂರ್ತಿ ಕುಲಕರ್ಣಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ನವೆಂಬರ್ 19ರಂದು ನಗರದ ಭೂಮರೆಡ್ಡಿ ಸರ್ಕಲ್‌ನಿಂದ ಕೆ.ಎಚ್. ಪಾಟೀಲ ಸರ್ಕಲ್‌ವರೆಗೆ ಬೀದಿ ಬದಿ ವ್ಯಾಪಾರಸ್ಥರಿಗೆ 92 ತಳ್ಳುವ ಗಾಡಿ ವಿತರಣೆಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ನಗರದ ಜನರಲ್ ಕಾರ್ಯಪ್ಪ ವೃತ್ತ, ಬೆಟಗೇರಿ ತರಕಾರಿ ಮಾರುಕಟ್ಟೆ, ಜೋಡು ಮಾರುತಿ ದೇವಸ್ಥಾನ ಸೇರಿದಂತೆ ವಿವಿಧ ಕಡೆಗಳಲ್ಲಿ ಎಲ್‌ಇಡಿ ಲೈಟ್ ಅಳವಡಿಕೆಗೆ ಕ್ರಮ ವಹಿಸಬೇಕು ಎಂದು ಸಚಿವ ಎಚ್.ಕೆ. ಪಾಟೀಲ ಸೂಚಿಸಿದರು.





ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು
ಬೆಳಕಿನ ಹಬ್ಬ ದೀಪಾವಳಿ ಪ್ರತಿಯೊಬ್ಬರ ಬಾಳಿನಲ್ಲಿ ಹೊಸತನ ತುಂಬಲಿ, ಗುರಿ- ಆಶಯಗಳಿಗೆ ಹೊಸ ಬೆಳಕು ಮೂಡಲಿ, ಹೊಸ ಮನ್ವಂತರ ನಿಮ್ಮದಾಗಲಿ...
ಭಗವಂತ ಸರ್ವರಿಗೂ ಸುಖ, ಶಾಂತಿ, ಸಮೃದ್ಧಿ, ಆರೋಗ್ಯ, ಐಶ್ವರ್ಯ ದಯಪಾಲಿಸಲಿ. ಸರ್ವರ ಬದುಕು ಹಸನಾಗಲಿ ಎಂದು ಶುಭ ಹಾರೈಸುವ,
ಶ್ರೀ ಶಂಕರ ಹುಲ್ಲಮ್ಮನವರ ಮುಖ್ಯಾಧಿಕಾರಿ
ಶ್ರೀ ವೆಂಕಟೇಶ ನಾಯಕ ಆಡಳಿತಾಧಿಕಾರಿಗಳು
ಶ್ರೀಮತಿ ಜಯಕ್ಕ ದುರಗಪ್ಪ ಕಳ್ಳಿ ಸದಸ್ಯರು
ಶ್ರೀಮತಿ ಮಂಜುಳಾ ಶಾಂತಪ್ಪ ಗುಂಜಳ ಸದಸ್ಯರು
ಶ್ರೀಮತಿ ಜಯವ್ವ ಮಹಾದೇವಪ್ಪ ಅಂದಲಗಿ ಸದಸ್ಯರು
ಶ್ರೀ ಮುಸ್ತಾಕಅಹ್ಮದ ಅಹ್ಮದಸಾಬ ಶಿರಹಟ್ಟಿ ಸದಸ್ಯರು
ಶ್ರೀ ಸಾಹೇಬಜಾನ ಬಾಶೀಂಸಾಬ ಹವಾಲ್ದಾರ ಸದಸ್ಯರು
ಶ್ರೀಮತಿ ಪೂರ್ಣಿಮಾ ಮಂಜುನಾಥಗೌಡ ಪಾಟೀಲ ಸದಸ್ಯರು
ಶ್ರೀ ಬಸವರಾಜ ಮಹಾದೇವಪ್ಪ ಓದಾನವರ ಸದಸ್ಯರು
ಶ್ರೀಮತಿ ಯಲ್ಲವ್ವ ಗಂಗಪ್ಪ ದುರಗಣ್ಣವರ ಸದಸ್ಯರು
ಶ್ರೀ ಮಹಾದೇವಪ್ಪ ಪುಟ್ಟಪ್ಪ ಅಣ್ಣಿಗೇರಿ ಸದಸ್ಯರು
ಶ್ರೀ ಮಹೇಶ ಬಸೆಟ್ಟೆಪ್ಪ ಹೊಗೆಸೊಪ್ಪಿನ ಸದಸ್ಯರು
ಶ್ರೀ ಸಿಕಂದರಬಾಷಾ ಸುಲೇಮಾನಸಾಬ ಕಣಕೆ ಸದಸ್ಯರು
ಶ್ರೀಮತಿ ಅಶ್ವಿನಿ ಶಿವಯೋಗೆಪ್ಪ ಅಂಕಲಕೋಟಿ ಸದಸ್ಯರು
ಶ್ರೀಮತಿ ನೀಲವ್ವ ಈರಪ್ಪ ಮೆಣಸಿನಕಾಯಿ ಸದಸ್ಯರು
ಶ್ರೀ ವಿಶ್ವಕರ್ಮ ಸೋಮಪ್ಪ ಹುಲಬಜಾರ ಸದಸ್ಯರು
ಶ್ರೀ ರಾಜೀವ ಗೊಡಚಪ್ಪ ಕುಂಬಿ ಸದಸ್ಯರು
ಶ್ರೀ ಪ್ರವೀಣ ತಿಪ್ಪಣ್ಣ ಬಾಳಿಕಾಯಿ ಸದಸ್ಯರು
ಶ್ರೀಮತಿ ವಾಣಿ ನೀಲಪ್ಪ ಹತ್ತಿ ಸದಸ್ಯರು
ಶ್ರೀಮತಿ ಕವಿತಾ ಗೋವಿಂದಪ್ಪ ಶೆರಸೂರಿ ಸದಸ್ಯರು
ಶ್ರೀ ವಿಜಯ ಮಾರ್ತಾಂಡಪ್ಪ ಕರಡಿ ಸದಸ್ಯರು
ಶ್ರೀಮತಿ ಪೂಜಾ ಪ್ರಮೋದ ಖರಾಟೆ ಸದಸ್ಯರು
ಶ್ರೀ ಫಿರ್ದೋಷ ಮೈನುದ್ದೀನ ಆಡೂರ ಸದಸ್ಯರು
ಶ್ರೀ ರಾಮಪ್ಪ ಬಸವಣ್ಣೆಪ್ಪ ಗಡದವರ ಸದಸ್ಯರು
ಶ್ರೀಮತಿ ಮಂಜವ್ವ ಫಕ್ಕೀರಪ್ಪ ನಂದೆಣ್ಣವರ ಸದಸ್ಯರು
ಸಮಸ್ತ ಸಿಬ್ಬಂಧಿಗಳು ಹಾಗೂ ಪೌರ ಕಾರ್ಮಿಕರು, ಪುರಸಭೆ ಲಕ್ಷ್ಮೇಶ್ವರ




ಸರ್ವರಿಗೂ ದೀಪಾವಳಿ ಹಬ್ಬದ ಶುಭಾಶಯಗಳು
ಕಹಿ ನೆನಪು ಮರೆಯಾಗಲಿ, ಸಿಹಿ ನೆನಪು ಬೆರೆಯಲಿ
ಬೆಳಕಿನ ಹಬ್ಬದಲ್ಲಿ ನೀವು ಕಂಡ ಕನಸು ನನಸಾಗಲಿ
ಸರ್ವರಿಗೂ ದೀಪಾವಳಿ ಹಬ್ಬದ ಶುಭಾಶಯಗಳು
ಶುಭ ಕೋರುವವರು
ಗದಗ-ಬೆಟಗೇರಿ ನಗರಸಭೆ
ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಪೌರಾಯುಕ್ತರು,
ಅಧಿಕಾರಿಗಳು ಹಾಗೂ ಸರ್ವ ಸಿಬ್ಬಂದಿ ವರ್ಗದವರು
ಶ್ರೀ ಎಲ್.ಡಿ. ಚಂದಾವರಿ
ವಿರೋಧ ಪಕ್ಷದ ನಾಯಕರು
ಶ್ರೀಮತಿ ಸುನಂದಾ ಪ್ರಕಾಶ ಬಾಕಳೆ
ಉಪಾಧ್ಯಕ್ಷರು
ಶ್ರೀಮತಿ ಉಷಾ ಮಹೇಶ ದಾಸರ
ಅಧ್ಯಕ್ಷರು
ಸರಿಯಾದ ಸಮಯಕ್ಕೆ ಕರ ಪಾವತಿಸಿ ನಗರದ ಅಭಿವೃದ್ಧಿಗೆ ಸಹಕರಿಸಿ.
ನಗರದ ಸ್ವಚ್ಛತೆ ಪ್ರತಿಯೊಬ್ಬರ ಆದ್ಯ ಕರ್ತವ್ಯ.
ನೀರನ್ನು ಮಿತವಾಗಿ ಬಳಸಿ.
ಹಸಿ ಕಸ ಹಾಗೂ ಒಣ ಕಸವನ್ನು ಬೇರ್ಪಡಿಸಿ ಕಸದ ವಾಹನದಲ್ಲೇ ಹಾಕಿ.

# ಲಿಂ. ಶ್ರೀ ಗುರುಬಸವ ಸ್ವಾಮಿಗಳ ಕನ್ನಡ ಸೇವೆ ಅನುಪಮ: ಡಾ. ತೋಂಟದ ಶ್ರೀ



■ ವಿಜಯಸಾಕ್ಷಿ ಸುದ್ದಿ, ಗದಗ

ತೋಂಟದಾರ್ಯ ಶಾಖಾಮಠ ಶಿರೋಳ ಹಾಗೂ ಚಿಂಚಣಿ ಮಠದ ಪೂಜ್ಯ ಶ್ರೀ ಗುರುಬಸವ ಸ್ವಾಮಿಗಳು ಗಡಿಭಾಗದಲ್ಲಿದ್ದುಕೊಂಡು ಸದಾ ಜನಪರ, ಕನ್ನಡಪರ ಕಾರ್ಯಗಳನ್ನು ಮಾಡುತ್ತಾ ಬಂದವರು. ಕನ್ನಡ ನಾಡು-ನುಡಿಯ ಸೇವೆಗಾಗಿ ಸದಾ ಬದ್ಧರಾಗಿದ್ದರು. ಕನ್ನಡ ಜಗದ್ಗುರು ಲಿಂಗೈಕ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ ಕೃಪಾಛತ್ರದಲ್ಲಿ ಬೆಳೆದ ಅವರು ಸಾಹಿತ್ಯ, ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆ ಅನನ್ಯ ಮತ್ತು ಅನುಪಮ ಎಂದು ಡಾ. ತೋಂಟದ ಸಿದ್ಧರಾಮ ಶ್ರೀಗಳು ಸಂತಾಪ ಸಲ್ಲಿಸಿದ್ದಾರೆ.

ಸಮಾಜದ ಶ್ರೇಯೋಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದ ಶ್ರೀಗಳು ಅಪಾರ ಭಕ್ತಸಮೂಹವನ್ನು ಹೊಂದಿದ್ದರು. ಪೂಜ್ಯರ ಅಗಲಿಕೆಯಿಂದ ಕನ್ನಡ ನಾಡು-ನುಡಿಗೆ ತುಂಬಲಾರದ ಹಾನಿಯುಂಟಾಗಿದೆ. ಬಸವಾದಿ ಪ್ರಮಥರು ಮತ್ತು ಸ್ವಾಮಿ ಸಿದ್ಧಲಿಂಗೇಶ್ವರರು ಪೂಜ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ. ಅಪಾರ ಭಕ್ತಸಮೂಹಕ್ಕೆ ದುಃಖ ಸಹಿಸುವ ಶಕ್ತಿಯನ್ನು ಭಗವಂತ ದಯಪಾಲಿಸಲಿ ಎಂದು ಡಾ. ತೋಂಟದ ಸಿದ್ಧರಾಮ ಶ್ರೀಗಳು ಪ್ರಾರ್ಥಿಸಿದ್ದಾರೆ.

## ಕವನ

### ದೀಪಾವಳಿ



ಬೆಳಗೋಣ ಬನ್ನಿ ದೀಪವ
ಮಾಡೋಣ ಬನ್ನಿ ಹಬ್ಬವ

ದೀಪದಿಂದ ದೀಪ ಹಚ್ಚೋಣ
ಅಂಧಕಾರವ ಕಳೆಯೋಣ
ಭಾವೈಕ್ಯತೆಯ ಬೆಸೆಯೋಣ
ಮಾನವೀಯತೆ ಬೆಳಗೋಣ

ಮನ-ಮನಗಳನ್ನು ಸೇರಿಸುತಾ
ವೈವಿದ್ಯತೆ ಎಂಬ ಏಕತೆಯ ಬಟ್ಟೆಗಳನ್ನು ಧರಿಸುತ್ತಾ
ಮನೆಯನ್ನು ಮೌಲ್ಯದಿಂದ ಅಲಂಕರಿಸುತಾ
ಸಂಭ್ರಮದಿಂದ ಸಮತೆ ಸಾರುತಾ

ಅಜ್ಞಾನವ ತೊಲಗಿಸಿ
ಸುಜ್ಞಾನವ ಬೆಳಗಿಸಿ
ಬಾಂಧವ್ಯಗಳ ಸೇರಿಸಿ
ಬಂಧನ ಗಟ್ಟಿಗೊಳಿಸಿ

ಭವದ ಅರ್ಥ ತಿಳಿಸಿ
ಆಡಂಬರ ದೂರ ಸರಿಸಿ
ಸರಳತೆ ಅನುಸರಿಸಿ
ಸತ್ಯವ ಮೇರಿಸಿ



– ಭಾಗ್ಯಶ್ರೀ ಗ.ಹಳ್ಳಿಕೇರಿಮಠ.
ಜಂತಲಿ ಶಿರೂರು, ಮುಂಡರಗಿ.

## ಬೆಳಕು ನಮ್ಮ ಜೀವನಕ್ಕೆ ಅವಿಭಾಜ್ಯ ಅಂಗವಾಗಲಿ

# ಬಾಳನ್ನು ಬೆಳಗುವ ದೀಪಾವಳಿ



ದೀಪ ಜ್ಞಾನದ ಕುರುಹು, ನಮ್ಮ ಜ್ಞಾನದ ಬಲದಿಂದ ತಮಂಧದ ಕೇಡು ನೋಡಯ್ಯ ಎಂದು ಶಿವಶರಣರು ಹೇಳಿದ್ದಾರೆ. ಒಂದು ದೀಪ ಉರಿದರೆ ಅದು ಶೋಕಾರಾಧನೆ, ಹತ್ತು ಹಲವು ಮತ್ತು ಸಹಸ್ರ ಸಹಸ್ರ ದೀಪಗಳು ಉರಿದರೆ ಅದು ಲೋಕಾರಾಧನೆ! ಸಾಲು ಸಾಲಾಗಿ ದೀಪಗಳು ಬೆಳಗುತ್ತಿದ್ದರೆ ಅದು ಸಂತೋಷದ ದ್ಯೋತಕ. ಮೊದಲು ಸ್ವತಃ ನಾವು ಬೆಳಗಬೇಕು, ನಂತರ ಬೇರೆಯವರ ಬಾಳನ್ನು ಬೆಳಕಾಗಿಸುವುದಕ್ಕೆ ಸಹಕರಿಸಬೇಕು.

ಬೆಳಕು ನಮ್ಮ ಜೀವನಕ್ಕೆ ಅವಿಭಾಜ್ಯ ಅಂಗವಾಗಿರಬೇಕು. ಜ್ಞಾನದ ಜ್ಯೋತಿಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಸಮೃದ್ಧಿಯ ಜೀವನ. ಅದಕ್ಕೆ ಶ್ರೀಕೃಷ್ಣ ಪರಮಾತ್ಮನು 'ಜ್ಞಾನಕ್ಕಿಂತ ಮಿಗಿಲಾದುದು ಮತ್ತು ಪವಿತ್ರವಾದುದು ಇನ್ನೊಂದಿಲ್ಲ' ಎಂದಿದ್ದು. ಬಸವಣ್ಣನವರೂ ಸಹ 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ' ಎಂದಿದ್ದಾರೆ. ದೀಪಾವಳಿ ವಿಜೃಂಭಣೆಯಿಂದ ಆಚರಿಸುವ ಐದು ದಿನಗಳ ದೊಡ್ಡ ಹಬ್ಬ. ಕತ್ತಲೆಯಿಂದ ಬೆಳಕಿನೆಡೆಗೆ ಕರೆಯೊಯ್ಯುವ, ಸಮೃದ್ಧಿ ಮತ್ತು ಆರೋಗ್ಯದ ಸಂಕೇತವೇ ದೀಪಾವಳಿ.

ಮನೆ ಮಂದಿಯೆಲ್ಲರೂ ಅತ್ಯಂತ ಶ್ರದ್ಧೆ, ಸಡಗರದಿಂದ ಶಾಸ್ತ್ರೋಕ್ತವಾಗಿ ಹಣತೆ ಬೆಳಗಿ, ಪಟಾಕಿ ಸಿಡಿಸಿ ಸಂಭ್ರಮಿಸುವ ದೀಪಾವಳಿ ಹಬ್ಬ ಮತ್ತೆ ಬಂದಿದೆ. ಎಲ್ಲೆಡೆ ದೀಪಗಳು ಬೆಳಗಲಿವೆ, ಹಬ್ಬಕ್ಕೆ ಮತ್ತಷ್ಟು ಮೆರುಗು ನೀಡಲು ವಿವಿಧ ಆಕಾರದ ಮಣ್ಣಿನ ಹಣತೆ, ಬಣ್ಣಬಣ್ಣದ ಮೇಣದ ಬತ್ತಿ, ಗೂಡು ದೀಪಗಳು ಕಂಗೊಳಿಸುತ್ತವೆ. ದೀಪಗಳನ್ನು ಬೆಳಗುವದು ಸುನಾತನ ಧರ್ಮದ ನಿತ್ಯ ಜೀವನದ ಸಹಜಧರ್ಮ ಕರ್ಮವೇ ಆಗಿದೆ. ಆಶ್ವಯುಜ ಮಾಸದ ಅಮಾವಾಸ್ಯೆ ಪರ್ವದಲ್ಲಿ ದೀಪವ ಜ್ಯೋತಿಸ್ವರೂಪ ಭಗವಂತನ ಆರಾಧನೆಯ ಮಹತ್ವದ್ದಾಗಿದೆ.

ದೀಪದಿಂದ ಅಂಧಕಾರ ನಾಶವೂ, ಕಾಂತಿಯೂ, ಗತಿಯೂ, ಜ್ಞಾನವೂ, ದೇವತಾದರ್ಶನವೂ, ವಂಶ ಕುಲ ಆಯುವರ್ಧಕವೂ ಆಗಿದೆಯೆಂದು ದೀಪಜ್ಯೋತಿಯನ್ನು ಸ್ತುತಿಸಿದ್ದಾರೆ. ದೀಪಾವಳಿ ಸಕಲ ಸಂಪತ್ತಿನ ಅಧಿದೇವತೆಯಾದ ಲಕ್ಷ್ಮೀಯ ಜನ್ಮದಿನ. ಆದ್ದರಿಂದ ದೀಪಾವಳಿಯ ಪರ್ವಕಾಲದಲ್ಲಿ ಜನರು ಕ್ಷೀರಸಮುದ್ರ ಸಂಜಾತೆಯಾದ ಲಕ್ಷ್ಮೀಯನ್ನು ತನು-ಮನಗಳಿಂದ ಪೂಜಿಸಿ ಅವಳನ್ನು ಧನಕ್ಕಾಗಿ ಪ್ರಾರ್ಥಿಸಿಕೊಳ್ಳುತ್ತಾರೆ. ದೀಪಾವಳಿಯು ಲಕ್ಷ್ಮೀಯ ಜನ್ಮದಿನವೂ ಹೌದು ಮತ್ತು ಅದು ಆಕೆಯ ವಿವಾಹ ಮಹೋತ್ಸವದ ದಿನವೂ ಆಗಿದೆ.

ಜೈನಧರ್ಮದ 24ನೇ ತೀರ್ಥಂಕರರಾದ ವರ್ಧಮಾನ ಮಹಾವೀರರು ಮಹಾನಿರ್ವಾಣ ಹೊಂದಿದ್ದು ದೀಪಾವಳಿಯಂದೇ. ದೀಪಾವಳಿಯಂದೇ ಶ್ರೀ ಗುರು ಗೋವಿಂದಜಿಯವರು ಜಹಾಂಗೀರ ಚಕ್ರವರ್ತಿಯ ಗ್ವಾಲಿಯರ ಕೋಟೆಯಿಂದ ಬಿಡುಗಡೆ ಹೊಂದಿ ಅಮೃತಸರಕ್ಕೆ ಮರಳಿ ಬಂದರು. ದೀಪಾವಳಿಯಂತ ಆರ್ಯಸಮಾದ ಸಂಸ್ಥಾಪಕ ದಯಾನಂದ ಸರಸ್ವತಿಯವರು ದಿವ್ಯಜ್ಞಾನವನ್ನು ಪಡೆಯುವ ಮೂಲಕ ಮಹರ್ಷಿ ದಯಾನಂದರಾಗುತ್ತಾರೆ. ಹೀಗಾಗಿ ದೀಪಾವಳಿ ಬಹಳಷ್ಟು ಮಹನಿಯರ ಬಾಳಿಗೆ ಬೆಳಕಾಗಿ ಜ್ಞಾನದ ಜ್ಯೋತಿಯಾಗಿ ಜಗವನ್ನು ಬೆಳಗಿಸಿದ್ದಾರೆ.

ಕತ್ತಲೆಯನ್ನು ಕೂಡ ಕೈಹಿಡಿದು ಬೆಳಕಿನತ್ತ ಕೊಂಡೊಯ್ಯುವ ಪ್ರಯತ್ನ ನಮ್ಮದು. ಭಾರತೀಯರಾದ ನಮಗೆ ಹಬ್ಬ-ಹರಿದಿನಗಳನ್ನು ಆಚರಿಸುವುದಕ್ಕೆ ಒಂದು ನಿಮಿತ್ತ ಬೇಕು. ಅದನ್ನೊಂದು ದೊಡ್ಡ ಹಬ್ಬವನ್ನಾಗಿ ಮಾರ್ಪಡಿಸುವ ಗುಣ ನಮ್ಮಲ್ಲಿದೆ. ಈ ದೃಷ್ಟಿಯಲ್ಲಿ ಒಬ್ಬಟ್ಟು, ಹೋಳಿಗೆ ಪಾಯಸ, ಕಡಬು ಕಜ್ಜಾಯ ಇತ್ಯಾದಿ ಸಿಹಗಳನ್ನು ತಿಂದುಕೊಂಡಿರುವದು ಹಬ್ಬವಲ್ಲ, ಬದುಕಿನ ಕಹಿಯನ್ನೆಲ್ಲ ನುಂಗಿಕೊಂಡು ಸ್ವತಃ ನಾವೇ ಸಿಹಿಯಾಗೋದು ಹಬ್ಬ. ಮನದಲ್ಲಿರುವ ಕಹಿ-ಕಲ್ಮಷವನ್ನೆಲ್ಲ ಕಳೆದುಕೊಂಡು ಸಿಹಿಯಾಗಿ ಮಾರ್ಪಾಟುಗೊಳ್ಳುವುದು ಹಬ್ಬ. ಸಾಲು ಸಾಲಾಗಿ ಇಟ್ಟಿರುವ ದೀಪಗಳನ್ನು ಬೆಳಗುವುದು ದೀಪಾವಳಿಯಲ್ಲ, ಸ್ವತಃ ನಾವೇ ದೀಪವಾಗಿ ಇನ್ನೊಬ್ಬರ ಬಾಳನ್ನು ಬೆಳಗುವುದು ದೀಪಾವಳಿ.

ದೀಪಾವಳಿಯ ಮೊದಲ ದಿನವು ಧನ್ವಂತರಿ ತ್ರಯೋದಶಿಯಿಂದ ಆರಂಭಗೊಳ್ಳುತ್ತದೆ. ಇದಕ್ಕೆ ಧನತೇರಸ್ ಎಂಬ ಇನ್ನೊಂದು ಪರ್ಯಾಯ ಹೆಸರಿದೆ. ದೀಪಾವಳಿಯ 2ನೇ ದಿನ ನರಕ ಚತುರ್ದಶಿ, ಮೂರನೆಯ ದಿನ ಅಮವಾಸ್ಯೆ, ಇದು ಲಕ್ಷ್ಮೀಪೂಜೆಗೆ ಮೀಸಲು. ದೀಪಾವಳಿಯ 4ನೇ ದಿನ ಬಲಿಪಾಡ್ಯಮಿ, ಅಂದು ಬಲಿಚಕ್ರವರ್ತಿಯನ್ನು ನೆನಪಿಸಿಕೊಳ್ಳುತ್ತ ದೇವರನ್ನೇ ವಾಮನನನ್ನಾಗಿಸಿ ದಾನ ನೀಡಿದ ಬಲಿಚಕ್ರವರ್ತಿಯನ್ನು ಗೌರವಿಸುತ್ತಾರೆ, ಗೋಪೂಜೆ ಮತ್ತು ಗೋವರ್ಧನ ಪೂಜೆಯನ್ನು ಮಾಡುತ್ತಾರೆ. ದೀಪಾವಳಿಯ 5ನೇ ದಿನ ಭಾಯಿದೂಜ್ ಎಂದು ಕರೆಯಲ್ಪಡುತ್ತದೆ. ಉತ್ತರ ಭಾರತದಲ್ಲಿ ಈ ಹಬ್ಬ ಬಲು ಜೋರು.

ಜ್ಞಾನದ ಸಂಕೇತವಾಗುವ ದೀಪಗಳನ್ನು ಮಣ್ಣಿನ ಪ್ರಣತಿಯಲ್ಲಿ ಹಚ್ಚಿ, ಸರ್ವರ ಅಂತರಂಗದಲ್ಲಿ ಜ್ಞಾನದ ಬೆಳಕು ಪ್ರಜ್ವಲಿಸಲೆಂದು ಹಾರೈಸುತ್ತ ಕತ್ತಲೆಯಿಂದ ಬೆಳಕಿನ ಕಡೆಗೆ ನಮ್ಮನ್ನು ಕರೆದೊಯ್ಯುವ ಎಲ್ಲರಿಗೂ ಒಳಿತಾಗಲಿ, ಎಲ್ಲರ ಬಾಳಿಗೂ ಬೆಳಕು ಬರಲಿ, ಎಲ್ಲೆಲ್ಲೂ ನಲಿವು ಉಕ್ಕಲಿ. ಬನ್ನಿ, ದೀಪಾವಳಿಯನ್ನು ಸಂಭ್ರಮಿಸುತ್ತ ನಮ್ಮ-ನಿಮ್ಮೆಲ್ಲರ ಬಾಳಿಗೆ ಬೆಳಕಿನ ದೀಪವ ಹಚ್ಚಿ ಸಂಭ್ರಮಿಸೋಣ.

– ಡಾ. ತಯಬಅಲಿ ಅ.ಹೊಂಬಳ.
ಗದಗ.

# ಮಾಜಿ ಪ್ರಧಾನಿ ಜವಾಹರಲಾಲ ನೆಹರು ಅವರ ಜಯಂತಿ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ದಿ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿರುವ ಗದಗ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ನ.14ರಂದು ಬೆಳಿಗ್ಗೆ 11 ಗಂಟೆಗೆ ಮಾಜಿ ಪ್ರಧಾನಿ ಜವಾಹರಲಾಲ ನೆಹರು ಅವರ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ರಾಜ್ಯ ಕಾನೂನು, ನ್ಯಾಯ ಹಾಗೂ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಪಾಲ್ಗೊಳ್ಳುವರು.

ಕಾರ್ಯಕ್ರಮದಲ್ಲಿ ಹಾಲಿ, ಮಾಜಿ ಶಾಸಕರು, ಪಕ್ಷದ ಜಿಲ್ಲಾ ಪದಾಧಿಕಾರಿಗಳು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪದಾಧಿಕಾರಿಗಳು, ಜಿ.ಪಂ, ತಾ.ಪಂ, ಗ್ರಾ.ಪಂ, ಎಪಿಎಂಸಿ ಪಕ್ಷದ ಅಧ್ಯಕ್ಷರು-ಸದಸ್ಯರು, ನಗರಸಭೆ, ಪಟ್ಟಣ ಪಂಚಾಯಿತಿ, ಪುರಸಭೆ ಅಧ್ಯಕ್ಷರು-ಸದಸ್ಯರು, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್, ಎಸ್ಸಿ/ಎಸ್ಟಿ, ಅಲ್ಪಸಂಖ್ಯಾತರ, ವಿದ್ಯಾರ್ಥಿ ಕಾಂಗ್ರೆಸ್, ಕಾಂಗ್ರೆಸ್ ಸೇವಾದಳ, ಹಿಂದುಳಿದ ವರ್ಗ, ಸಾಮಾಜಿಕ ಜಾಲತಾಣ, ರಾಜೀವಗಾಂಧಿ ಪಂಚಾಯತ ಸಂಘಟನೆ, ಮಾಜಿ ಸೈನಿಕರ ವಿಭಾಗ, ಮೀನುಗಾರ ವಿಭಾಗ, ಕಾರ್ಮಿಕರ ವಿಭಾಗ, ಐಎನ್‌ಟಿಯುಸಿ, ಕಾನೂನು ಮತ್ತು ಮಾನವ ಹಕ್ಕು ವಿಭಾಗ, ಕಿಸಾನ್ ಮತ್ತು ಖೇತ್ ಮಜದೂರ ವಿಭಾಗ, ವೈದ್ಯರ ವಿಭಾಗ, ವೃತ್ತಿಪರ ವಿಭಾಗ, ಪದವೀಧರ ಹಾಗೂ ಶಿಕ್ಷಕರ ವಿಭಾಗ, ನೀತಿ ಮತ್ತು ಸಂಶೋಧನೆ ತರಬೇತಿ ವಿಭಾಗ, ವಿಕಲಚೇತನರ ವಿಭಾಗ, ಲೀಗಲ್ ರಿಫಾರ್ಮ್ಸ್ ವಿಭಾಗ, ಐಟಿ ಮತ್ತು ಡಾಟಾ ವಿಭಾಗ, ಮಾಧ್ಯಮ ವಿಭಾಗಗಳ ಅಧ್ಯಕ್ಷರು ಹಾಗೂ ಸದಸ್ಯರು, ಪಕ್ಷದ ಅಭಿಮಾನಿಗಳು ಪಾಲ್ಗೊಳ್ಳಬೇಕೆಂದು ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಬಿ. ಅಸೂಟಿ ಹಾಗೂ ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ ವಿನಂತಿಸಿದ್ದಾರೆ.

# ದೀಪಾವಳಿ ಹಬ್ಬಕ್ಕೆ ಸಡಗರದ ಸಿದ್ಧತೆ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ತಾಲೂಕಿನ ಜನತೆ ದೀಪಾವಳಿ ಹಬ್ಬವನ್ನು ಅತ್ಯಂತ ಸಡಗರ-ಸಂಭ್ರಮದಿಂದ ಆಚರಿಸಲು ಸಿದ್ಧತೆ ನಡೆಸಿದ್ದಾರೆ. ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಕಳೆದ 2-3 ದಿನಗಳಿಂದಲೂ ಮಾರುಕಟ್ಟೆ ಜನಜಂಗುಳಿಯಿಂದ ಕೂಡಿದೆ. ಬಟ್ಟೆ, ದಿನಸಿ ಅಂಗಡಿ, ತರಕಾರಿ ಮಾರುಕಟ್ಟೆ, ಕಬ್ಬು, ಬಾಳೆ ಹೀಗೆ ಎಲ್ಲೆಡೆ ಖರೀದಿಯಲ್ಲಿ ನಿರತರಾಗಿದ್ದಾರೆ.

ದೀಪಾವಳಿ ಅಮವಾಸ್ಯೆ ಮತ್ತು ಪಾಡ್ಯ ಪೂಜೆಗೆ ಬೇಕಾಗುವ ಹೂ, ಹಣ್ಣು, ಕಬ್ಬು, ಬಾಳೆ ದಿಂಡು, ಅಲಂಕಾರಿಕ ವಸ್ತುಗಳು ಸೇರಿದಂತೆ ಇನ್ನಿತರ ವಸ್ತುಗಳನ್ನು ಖರೀದಿಸಲು ನೆರೆಯ ತಾಲೂಕು ಹಾಗೂ ಗ್ರಾಮಗಳ ಜನರು ಪಟ್ಟಣಕ್ಕೆ ಆಗಮಿಸುತ್ತಿದ್ದಾರೆ. ಲ್ಲಿನ ಜೋಡು ರಸ್ತೆಯಲ್ಲಿ ಹಣ್ಣು, ತರಕಾರಿ, ಅಲಂಕಾರಿಕ ವಸ್ತುಗಳು ಮಾರಾಟಕ್ಕೆ ಹಾಗೂ ಎಪಿಎಂಸಿ ಎದುರಿನ ಬಯಲು ಜಾಗೆಯಲ್ಲಿ ಕಬ್ಬು, ಹೂ, ಬಾಳೆ ದಿಂಡು, ಡೈರಿ, ಹೂವಿನ ಗಿಡಗಳ ಮಾರಾಟ ನಡೆಯುತ್ತಿದೆ.

ಸದಾ ಒಂದಿಲ್ಲೊಂದು ಸಂಕಷ್ಟಕ್ಕೆ ಸಿಲಕುವ ಅನ್ನದಾತ, ನೇಕಾರರು, ಕುಂಬಾರರ ಬಾಳಿಗೆ ದೀಪಾವಳಿ ಕೊಂಚ ಆಧಾರ ಎನಿಸಿದೆ. ಸ್ಥಳೀಯ ಜೋಡು ರಸ್ತೆಯಲ್ಲಿ ದ್ವಿಚಕ್ರ ವಾಹನ ಹೊರತುಪಡಿಸಿ ದೊಡ್ಡ ವಾಹನಗಳ ಸಂಚಾರಕ್ಕೆ ಕಡಿವಾಣ ಹಾಕಲಾಗಿತ್ತು. ಆದರೂ, ಪಟ್ಟಣದ ಪಿಎಸ್‌ಐ ರಾಘವೇಂದ್ರ ಎಸ್ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿ ಸುಗಮ ಸಂಚಾರಕ್ಕೆ ಹರಸಾಹಸ ಪಡುವಂತಾಯಿತು.

## ಸಾಮರಸ್ಯ ಬೀಜ ಬಿತ್ತಿದ್ದ ಗುರುಬಸವ ಶ್ರೀಗಳ ಅಗಲಿಕೆಗೆ ಕಣ್ಣೀರು ಹಾಕಿದ ಭಕ್ತರು

# ಶಿರೋಳದ ಗುರುಬಸವ ಶ್ರೀಗಳಿಗೆ ನಮನ



■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಶಿರೋಳದ ಗುರುಬಸವ ಸ್ವಾಮೀಜಿಗಳ ಅಗಲಿಕೆ ಹಿನ್ನೆಲೆಯಲ್ಲಿ ರವಿವಾರ ಪಟ್ಟಣದ ಗೌಳಿಗಲ್ಲಿಯ ಗರಡಿಮನೆ ಮುಂಭಾಗದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಶ್ರೀಗಳ ಪೂರ್ವಾಶ್ರಮ ಮತ್ತು ಸಮಾಜ ಸುಧಾರಕ ನಡೆಗಳ ಬಗ್ಗೆ ಭಕ್ತರು ನುಡಿ ನಮನ ಸಲ್ಲಿಸಿದರು.

ಶ್ರೀಗಳ ಪೂರ್ವಾಶ್ರಮವಾಗಿದ್ದ ಗಜೇಂದ್ರಗಡದ ಗರಡಿ ಮನೆಯ ಮುಂದೆ ಆಡಿ, ಬೆಳೆಯುತ್ತಾ ಪಿಯುಸಿವರೆಗೆ ವ್ಯಾಸಾಂಗ ಮಾಡಿದ ಶ್ರೀಗಳು, ಜಗದ್ಗುರು ಡಾ.ತೋಂಟದ ಡಾ.ಸಿದ್ಧಲಿಂಗ ಶ್ರೀಗಳ ಅಪ್ಪಣೆ ಮೇರೆಗೆ ಬೆಳಗಾವಿಯ ಚಿಂಚಲಿ ಮಠದ ಪೀಠಾಧಿಪತಿಯಾದರು. ಮಠದಲ್ಲಿ ನಿತ್ಯವೂ ಶರಣ ಸಂಸ್ಕೃತಿಯ ಪ್ರಸಾರದ, ಗಡಿ ಭಾಗದಲ್ಲಿ ಕನ್ನಡ ಗುಡಿ ಕಟ್ಟುವ ಮೂಲಕ ಮಠವನ್ನು ಕನ್ನಡ ಮಠ ಹಾಗೂ ಕನ್ನಡ ಸ್ವಾಮೀಜಿ ಎನ್ನುವ ಕೀರ್ತಿಗೆ ಭಾಜನರಾದ ಶ್ರೀಗಳನ್ನು ಭಕ್ತರು ಅಲ್ಲಮಪ್ರಭು ಸ್ವಾಮೀಜಿ ಎಂದು ಮನತುಂಬಿ ಸಂಭೋದಿಸುತ್ತಿದ್ದರು ಎಂದು ಭಕ್ತರು ನೆನೆದರು.

ದೇಶವು ಸರ್ವ ಜನಾಂಗದ ಶಾಂತಿಯ ತೋಟವಾಗಿದ್ದು ಎಲ್ಲರೂ ಸಹ ಸಾಮರಸ್ಯದ ಜೀವನ ನಡೆಸುವುದು ಮಾನವ ಕುಲಕ್ಕೆ ಆದರ್ಶ ಎಂಬದನ್ನು ಬಲವಾಗಿ ಮಂಡಿಸುತ್ತಿದ್ದರು. ಶ್ರೀಗಳ ವಿದ್ವತ್ತನ್ನು ಮೆಚ್ಚಿ ಜಗದ್ಗುರು ಡಾ.ತೋಂಟದ ಸಿದ್ದಲಿಂಗ ಶ್ರೀಗಳು ಶಿರೋಳದ ಮಠಕ್ಕೆ ಪೀಠಾಧಿಪತಿಯನ್ನಾಗಿ ನೇಮಿಸಿದರು. ಶಿರೋಳ ಭಾಗದಲ್ಲಿ ರೊಟ್ಟಿ ಜಾತ್ರೆ ಮಾಡುವ ಮೂಲಕ ಶ್ರೀಗಳು ಸಾಮರಸ್ಯದ ಬೀಜವನ್ನು ಬಿತ್ತಿದ್ದರು ಎಂದು ಇಲ್ಲಿನ ತಿಪ್ಪಣ್ಣ ಪಲ್ಲೇದ, ರಜಾಕಸಾಬ ಗೊಡೇಕಾರ, ಗುಂಡಪ್ಪ ಪಲ್ಲೇದ, ರಜಾಕಸಾಬ ಹುನಗುಂದ, ಬಸವರಾಜ ವದೆಗೋಳ ನೆನೆದರು.

ಮೌಲಾಸಾಬ ಜೂಲಕಟ್ಟಿ, ಅಬ್ದುಲಸಾಬ ತಹಸೀಲ್ದಾರ್, ಉದಯಸಿಂಗ್ ರಜಪೂತ, ಬಾಬು ಪವಾರ, ಮುರ್ತುಜಾಸಾಬ ಒಂಟಿ, ಪಾಲು ರಾಠೋಡ, ಸಮದಸಾಬ ಒಂಟಿ, ಶಿವಪ್ಪ ತುಂಬರಗುದ್ದಿ, ಸಲೀಂ ಹುನಗುಂದ, ಮೈನು ತಾಳಿಕೋಟಿ, ಜಗದೀಶ ಹೊಸಳ್ಳಿ, ಕಳಕಪ್ಪ ತಳವಾರ, ಗುಲಾಂನಬಿ ಹುನಗುಂದ ಸೇರಿ ಇತರರು ಶ್ರದ್ಧಾಂಜಲಿ ಅರ್ಪಿಸಿದರು.

## ಗ್ರಾಮೀಣ ಪ್ರದೇಶದಲ್ಲಿ ಆಚರಿಸುವ ಹಟ್ಟಿ ಹಬ್ಬದ ಪರಿಚಯ

# ಹಳ್ಳಿ ಸಂಸ್ಕೃತಿಯ ಕೊಂಡಿ 'ಹಟ್ಟಿ ಹಬ್ಬ'

'ಹಟ್ಟೆವ್ವನ ಮರೆತು ಹೆಂಗ ದೀಪಾವಳಿ ಆಚರಿಸಲಿ' ಎನ್ನುವ ಗ್ರಾಮೀಣ ಜನಪದದಲ್ಲಿ ಒಂದು ಮಾತಿದೆ. ಅದರಂತೆ ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ದೀಪಾವಳಿ ಹಬ್ಬಕ್ಕೆ 'ಹಟ್ಟಿ ಹಬ್ಬ' ಎಂದೂ ಕರೆಯುತ್ತಾರೆ. ಈ ಸಂದರ್ಭದಲ್ಲಿ 'ಹಟ್ಟೆವ್ವನ ಪೂಜೆ' ಎಂಬ ವಿಶಿಷ್ಟ ಆಚರಣೆಯಿದೆ. ದೀಪಾವಳಿ ಅಮಾವಾಸ್ಯೆಯ ಮರುದಿನ ಪಾಡ್ಯದಂದು ಹಟ್ಟಿ ಹಬ್ಬ ಅಥವಾ ಗೂಳವ್ವನ ಹಬ್ಬವೆಂದು ಆಚರಿಸುವುದನ್ನು ಅಲ್ಲಿ ಕಾಣುತ್ತೇವೆ. ಕೊಟ್ಟಿಗೆ ಕಾಯುವ ದೇವತೆಯೇ ಹಟ್ಟೆವ್ವ. ಹಟ್ಟೆವ್ವನ ಸಾಂಕೇತಿಕ ಪ್ರತಿಮೆಗಳನ್ನು ತಯಾರಿಸಲು ಸೆಗಣಿಯನ್ನು ಬಳಸುತ್ತಾರೆ.



ದೀಪಾವಳಿ ಇದರ ಮೂಲ ಹೆಸರು ಮತ್ತು ನಮ್ಮ ಪ್ರಾದೇಶಿಕವಾಗಿ ಕರೆಯುವ ಹೆಸರು ಹಟ್ಟಿ ಹಬ್ಬ. ಪುರಾತನ ಕಾಲದಿಂದಲೂ ಹಟ್ಟಿಕಾರರಿಂದ ಈ ಹೆಸರು ಬಂದಿದೆ. ಪ್ರಾಚೀನ ನಾಗರಿಕತೆಯ ನಾಯಕರೆಲ್ಲರೂ ಪಶುಪಾಲಕರೇ ಆಗಿದ್ದು ಇಲ್ಲಿ ಕೃಷ್ಣನನ್ನು ಉದಾಹರಿಸಬಹುದು. ಈ ರೀತಿಯ ಆಚರಣೆಗಳಲ್ಲಿ ಪಶುಪಾಲಕರಾದ ಕುರುಬರು ಗೊಲ್ಲರದು ವಿಶಿಷ್ಟ ಆಚರಣೆಗಳಿವೆ ಎನ್ನುವ ಪ್ರತೀತಿ ಇದೆ.

ಈ ಕಾರ್ಯಕ್ಕಾಗಿ ಹಟ್ಟಿಯನ್ನು ಸ್ವಚ್ಛಗೊಳಿಸುವ ಜೊತೆಗೆ ದಿನವಿಡೀ ತಮ್ಮ ದನಕರುಗಳು ಹಾಕಿದ ಸಗಣಿಯನ್ನು ತಿಪ್ಪೆಗುಂಡಿಗೆ ಹಾಕದೇ ತಮಗೆ ಹಟ್ಟಿ ಲಕ್ಕವ್ವ ಮೂರ್ತಿ ಹಾಗೂ ಪಾಂಡವರ ಮೂರ್ತಿಗಳನ್ನು ಮಾಡಿ ಇಡಲು ಬೇಕಾಗುವ ಸೆಗಣಿಯನ್ನು ಮಡಿಯಿಂದ ಒಂದೆಡೆ ತಗೆದಿಟ್ಟಿರುತ್ತಾರೆ. ಈ ಸೆಗಣಿಯಿಂದ ಎರಡು ದೊಡ್ಡ ಹಾಗೂ 40ರಿಂದ 50 ಸಣ್ಣ ಹಟ್ಟೆವ್ವಗಳನ್ನು ತಯಾರಿಸಿಡುತ್ತಾರೆ. ಸಣ್ಣ ಸಣ್ಣ 'ಹಟ್ಟೆವ್ವ'ಗಳನ್ನು ವರ್ತುಲಾಕಾರದಲ್ಲಿ ಅಥವಾ ಚೌಕಾಕಾರದಲ್ಲಿ ಎರಡು ಸಾಲುಗಳಲ್ಲಿ ಇಡುತ್ತಾರೆ. ನಡುವೆ ದಾರಿಯ ರೀತಿಯಲ್ಲಿ ಜಾಗ ಬಿಡುತ್ತಾರೆ. ವರ್ತುಲದ ನಡುವೆ ದೊಡ್ಡ ಹಟ್ಟೆವ್ವಗಳನ್ನು ಇಡುತ್ತಾರೆ. ದೊಡ್ಡ ಹಟ್ಟೆವ್ವನನ್ನು 'ಹಿರೇ ಹಟ್ಟೆವ್ವ' ಎಂದು ಕರೆಯುತ್ತಾರೆ.


ಹಿರೇ ಹಟ್ಟೆವ್ವನ ನೆತ್ತಿಯಲ್ಲಿ ಅರಳಿನ ಜೋಳದ ತೆನೆ, ಉತ್ತರಾಣಿ ಕಡ್ಡಿ ಹಾಗೂ ಮೂಗಿಗೆ ಮೂಗುತಿಯಾಗಿ ಮೆಣಸಿನಕಾಯಿ ಮತ್ತು ಮಾನಿ ಹುಲ್ಲಿನಲ್ಲಿ ಕಡ್ಡಿಗಳಿಂದ ಹೆಣೆದು ತಯಾರಿಸಿದ ನಾಗರ ಹೆಡೆಯನ್ನು ಚುಚ್ಚಿ ಇರಿಸುತ್ತಾರೆ. ಹೀಗೆ ಸಗಣಿಯಿಂದ ಹಟ್ಟೆವ್ವನನ್ನು ಮತ್ತು ಪಾಂಡವರನ್ನು ಮಾಡಿ, ಹಟ್ಟೆವ್ವನನ್ನು ಇಟ್ಟಿರುವ ಸ್ಥಳದವರೆಗೂ ಆಕಳ ಹೆಜ್ಜೆಗಳನ್ನು ತಮ್ಮ ಕೈ ಮುಟಗೀ ಮಾಡಿ ಅದಕ್ಕೆ ಕೆಮ್ಮಣ್ಣು ಮತ್ತು ಬಿಳಿ ಸುಣ್ಣವನ್ನು ಬಳಸಿ ಹೆಜ್ಜೆ ಮೂಡಿಸುತ್ತಾರೆ. ದೇವರ ಜಗಲಿ, ಮುಂದಿನ ಹಿಂದಿನ ಬಾಗಿಲು ಕುಂಟಿ, ರಂಟಿ, ಚಕ್ಕಡಿ ಮೇಲೆ,ಹಗೇವು, ಒಲೆ ಮೇಲೆ, ಬಿಸಿಕಲ್ಲು, ಒಳ್ಳು(ಒರಳು) ಮೇಲೆ ಹಾಗೂ ಹಿತ್ತಲದಾಗ ಕುಂಬಳ ಬಳ್ಳಿ ಹತ್ತಿರ ಹಟ್ಟೆವ್ವನ ಮೂರ್ತಿಮಾಡಿ ಇಡುತ್ತಾರೆ.

ಅವುಗಳಿಗೆ ಉತ್ತರಾಣಿ ಕಡ್ಡಿ, ಹೊನ್ನಾರಿಕೆ ಹೂವು, ಪುಂಡಿ ಹೂ, ಚೆಂಡು ಹೂ, ಗುರೆಳ್ಳು ಹೂ, ಕೋಲಾಣಿ ಹಾಗೂ ಇನ್ನಿತರ ಹಲವು ವಿಧದ ಹೂವುಗಳಿಂದ ಅಲಂಕರಿಸಿ, ಶೃಂಗರಿಸಿ ಎಲ್ಲಾ ಹಟ್ಟೆವ್ವಗಳಿಗೂ ಕುಂಕುಮ, ಮೊಸರು, ಹೂವುಗಳನ್ನು ಮುಡಿಸಿ



ಪೂಜಿಸುತ್ತಾರೆ. ಅಂದು ಶ್ಯಾವಿಗೆ ಹಾಗೂ ಅನ್ನವನ್ನು ಮಾಡಿ ಎಡೆ ಹಿಡಿಯುವರು. ಈ ದಿನಗಳಲ್ಲಿ ಸಕ್ಕರೆ ಶ್ಯಾವಿಗೆ, ಬೆಲ್ಲದ ಶ್ಯಾವಿಗೆಗೆ ಹಾಲು ಹಾಕಿ ಊಟಕ್ಕೆ ಹೆಚ್ಚು ಬಳಕೆ ಮಾಡುವರು. ಇದನ್ನು ಹಟ್ಟಿ ಹಬ್ಬದ ವಿಶೇಷ ಸಿಹಿ ಅಡುಗೆ. ಸಂಜೆಯ ವೇಳೆಗೆ ಈ ಹಟ್ಟೆವ್ವಗಳನ್ನು ಮನೆಯ ಮಾಳಿಗೆ ಕುಂಬಿಯ ಮೇಲೆ ಹಿತ್ತಲ ಬಾಗಿಲ ಮತ್ತು 'ಮುಚ್ಚಿ' ಬಾಗಿಲ ಮೇಲೆ ಸಾಲಾಗಿ ಇರಿಸುತ್ತಾರೆ. ಹಿರೇ ಹಟ್ಟೆವ್ವಗಳನ್ನು ಬಾಗಿಲ ಮೇಲೆ, ಸಣ್ಣ ಹಟ್ಟೆವ್ವಗಳ ನಡುವೆ ಇರಿಸುತ್ತಾರೆ. ಮತ್ತೊಮ್ಮೆ ಹೂವುಗಳಿಂದ ಅಲಂಕರಿಸುತ್ತಾರೆ.

ಒಟ್ಟಾರೆಯಾಗಿ ಕಾಲ ಎಷ್ಟೇ ಬದಲಾದರೂ ಆಚರಣೆಗಳು ಇಂದಿಗೂ ಬದುಕಿವೆ. ಮಹಾನಗರಗಳಲ್ಲಿ ಈ ಪದ್ಧತಿ ಮರೆತಿರಬಹುದು. ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಈ ದಿನ ಭೂ ತಾಯಿಗೆ ನಮಿಸಿ, ಸುಖವಾಗಿ ಜೀವನ ನಡೆಸಲು ಆ ದೇವರಲ್ಲಿ ಪ್ರಾರ್ಥಿಸಲಾಗುತ್ತದೆ. ನಮ್ಮೊಡನೆ ನಮಗೆ ಆಧಾರಸ್ತಂಭವಾಗಿರುವ ಗೋವುಗಳ ರಕ್ಷಣೆ ಮಾಡುವುದು ಇದರ ಉದ್ದೇಶ. ಹಬ್ಬಗಳ ಆಚರಣೆಯ ಮೂಲಕ ನಮ್ಮ ಸಂಪ್ರದಾಯವನ್ನು ಪಾಲಿಸುವ ಹಬ್ಬಗಳು ಇಂದಿಗೂ ಮನೆಮನೆಗಳಲ್ಲಿ ಜರುಗಿ, ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತಿರುವುದು ಸ'ಂತ'ಸ'ದ' ವಿಷಯ.



– ಬಸವರಾಜ ಎಮ್.ಯರಗುಪ್ಪಿ.
ಬಿಆರ್‌ಪಿ ಶಿರಹಟ್ಟಿ,
ಲಕ್ಷ್ಮೇಶ್ವರ.

# ಮುಂಜಾಗ್ರತಾ ಕ್ರಮವಾಗಿ ಪಟಾಕಿ ಅಂಗಡಿಗಳ ತಾತ್ಕಾಲಿಕ ಸ್ಥಳಾಂತರ



■ ವಿಜಯಸಾಕ್ಷಿ ಸುದ್ದಿ, ಗದಗ

ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಗದಗ ಜಿಲ್ಲೆಯಲ್ಲಿ ಅಧಿಕೃತ ಪರವಾನಿಗೆ ಪಡೆದುಕೊಂಡ ಹಾಗೂ ತಹಸೀಲ್ದಾರರು ಸಲ್ಲಿಸಿದ ವರದಿಗಳಲ್ಲಿ ಶಿಫಾರಸ್ಸು ಮಾಡಿದ ಲೈಸೆನ್ಸದಾರರ ಪಟಾಕಿ ಅಂಗಡಿಗಳನ್ನು ನವೆಂಬರ್ 20ರವರೆಗೆ ಗದಗ ಜಿಲ್ಲೆಯ ನಗರ/ಪಟ್ಟಣ/ ಗ್ರಾಮೀಣ ಪ್ರದೇಶಗಳ ಈ ಕೆಳಕಂಡ ಸ್ಥಳಗಳಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡುವ ಷರತ್ತಿಗೊಳಪಟ್ಟು ತಾತ್ಕಾಲಿಕವಾಗಿ ಸ್ಥಳಾಂತರಿಸಲು ಆದೇಶಿಸಲಾಗಿದೆ. ಇನ್ನುಳಿದ ಪಟಾಕಿ ಅಂಗಡಿಗಳಿಗೆ ವ್ಯಾಪಾರ ಮಾಡುವುದನ್ನು ನಿರ್ಬಂಧಿಸಿದೆ.

ಗದಗ ತಾಲೂಕಿನಲ್ಲಿ ನಗರದ ವಿಡಿಎಸ್‌ಟಿ ಕಾಲೇಜು ಮೈದಾನದಲ್ಲಿ, ರೋಣ ತಾಲೂಕಿನಲ್ಲಿ ಸುಂಕದ ಜಿನ್ನಿಂಗ್ ಫ್ಯಾಕ್ಟರಿ ಹಾಗೂ ಹೊಳೆಆಲೂರು ಎಪಿಎಂಸಿಯಲ್ಲಿ, ಗಜೇಂದ್ರಗಡ ತಾಲೂಕಿನಲ್ಲಿ ಗಜೇಂದ್ರಗಡ ಪುರಸಭೆ ಬಯಲು ಜಾಗ ಹಾಗೂ ನರೇಗಲ್ ಎಪಿಎಂಸಿ ಗೋಡಾನ್ ಹತ್ತಿರ ಬಯಲು ಜಾಗ, ಶಿರಹಟ್ಟಿ ತಾಲೂಕಿನಲ್ಲಿ ಶಿರಹಟ್ಟಿ ಎಫ್.ಎಂ. ಡಬಾಲಿ ಹೈಸ್ಕೂಲ್ ಮೈದಾನ ಹಾಗೂ ಬೆಳ್ಳಟ್ಟಿ ಶ್ರೀ ಯೋಗಿ ವೇಮನ ಪ್ರೌಢಶಾಲೆ ಮೈದಾನದಲ್ಲಿ, ಲಕ್ಷ್ಮೇಶ್ವರ ತಾಲೂಕಿನಲ್ಲಿ ಲಕ್ಷ್ಮೇಶ್ವರದ ಶಿಗ್ಲಿ ನಾಕಾ ಹತ್ತಿರ, ಪುರಸಭೆ ಬಯಲು ಜಾಗದಲ್ಲಿ ಹಾಗೂ ಶಿಗ್ಲಿಯ ಹೊಸ ಬಸ್ ಸ್ಟ್ಯಾಂಡ್ ಹತ್ತಿರ ಬಯಲು ಜಾಗ, ಮುಂಡರಗಿ ತಾಲೂಕಿನ ತಾಲೂಕು ಕ್ರೀಡಾಂಗಣದಲ್ಲಿ, ನರಗುಂದ ತಾಲೂಕಿನ ಪಿಎಲ್‌ಡಿ ಬ್ಯಾಂಕ್ ಹತ್ತಿರ ತೋಟದ ಕೆರೆಯ ಬಯಲು ಜಾಗದಲ್ಲಿ ತಾತ್ಕಾಲಿಕ ಶೆಡ್ಡುಗಳನ್ನು, ಅಗ್ನಿ ಶಾಮಕ ಇಲಾಖೆ ಕರಾರುಗಳಂತೆ ನಿರ್ಮಿಸಿಕೊಂಡು ಹಾಗೂ ಸುರಕ್ಷತೆಯ ಎಲ್ಲ ವ್ಯವಸ್ಥೆಗಳನ್ನು ಅಳವಡಿಸಿಕೊಂಡು ಹಸಿರು ಪಟಾಕಿ ಮಾರಾಟ ಮಾಡಲು ಜಿಲ್ಲಾ ದಂಡಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಆದೇಶ ಹೊರಡಿಸಿದ್ದಾರೆ.

### ಬರಗಾಲದ ನಡುವೆಯೂ ಸಂಪ್ರದಾಯ ಬಿಡಲೊಪ್ಪದ ಜನತೆ

# ಜಿಲ್ಲೆಯಲ್ಲಿ ಬೆಳಕಿನ ಹಬ್ಬದ ಸಂಭ್ರಮ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಮುಂಗಾರು-ಹಿಂಗಾರಿನ ಬರದ ಸಂಕಷ್ಟದ ನಡುವೆಯೂ ನಾಡಿನ ಬಹುದೊಡ್ಡ ಹಬ್ಬ ದೀಪಾವಳಿಯನ್ನು ಸಾಂಪ್ರದಾಯಿಕವಾಗಿ ಆಚರಿಸಲು ಜನತೆ ಸನ್ನದ್ಧವಾಗಿದ್ದಾರೆ. ಅದಕ್ಕಾಗಿ ಲಕ್ಷ್ಮೇಶ್ವರ ಪಟ್ಟಣದ ಮಾರುಕಟ್ಟೆಯಲ್ಲಿ ಕಳೆದ ಮೂರ್‍ನಾಲ್ಕು ದಿನಗಳಿಂದ ಅಗತ್ಯ ವಸ್ತುಗಳ ಖರೀದಿಯ ಭರಾಟೆ ಜೋರಾಗಿಯೇ ನಡೆದಿದೆ.

ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿನ ಕಿರಾಣಿ, ಬಟ್ಟೆ, ಹಾರ್ಡ್‌ವೇರ್, ಇಲೆಕ್ಟ್ರಿಕಲ್ ಅಂಗಡಿಗಳಷ್ಟೇ ಅಲ್ಲದೇ ರಸ್ತೆ ಇಕ್ಕೆಲಗಳಲ್ಲಿನ ಹಣ್ಣು, ಹೂವು, ಬಟ್ಟೆ, ಆಕಾಶ ಬುಟ್ಟಿ, ಹಣತೆ, ಲಕ್ಷ್ಮೀ ಪೂಜೆಗೆ ಸೀರೆ, ಆಭರಣ, ಅಲಂಕಾರಿಕ ವಸ್ತುಗಳ ಮಾರಾಟ ನಡೆಯುತ್ತಿದೆ. ಮಾರುಕಟ್ಟೆಯಲ್ಲಿ ನಾನಾ ಬಗೆಯ ಆಕಾಶ ಬುಟ್ಟಿಗಳು, ಥರಾವರಿ ಮಣ್ಣಿನ ಹಣತೆ, ಪಿಂಗಾಣಿ ಹಣತೆ, ತೆಂಗಿನಕಾಯಿ ದೀಪ, ಆನೆ ದೀಪ, ನಕ್ಷತ್ರ ದೀಪ, ಗಣೇಶ ದೀಪ, ಲಕ್ಷ್ಮೀ ದೀಪ, ಚಟ್ಟಿ ದೀಪ ಹೀಗೆ ನಾನಾ ತರಹದ ಹಣತೆಗಳು ಗ್ರಾಹಕರನ್ನು ಆಕರ್ಷಿಸುತ್ತಿವೆ.

ದಿನಸಿ, ತರಕಾರಿ ಸೇರಿ ಗೃಹ ಬಳಕೆಯ ಎಲ್ಲ ವಸ್ತುಗಳ ಬೆಲೆ ಗಗನಕ್ಕೇರಿವೆ. ಬೇಳೆಕಾಳು, ಬೆಲ್ಲ, ಎಣ್ಣೆ, ಸಕ್ಕರೆ, ಮೈದಾ, ಅಕ್ಕಿ ಸೇರಿ ಅಗತ್ಯ ದಿನಸಿ ವಸ್ತುಗಳ ಬೆಲೆ ಬಡವರ ಕೈಗೆಟುದಂತಾಗಿದೆ. ತರಕಾರಿ, ಹಣ್ಣು-ಹೂವು, ಸ್ಟೇಶನರಿ ಹೀಗೆ ಎಲ್ಲ ವಸ್ತುಗಳ ಬೆಲೆಯಲ್ಲಿ ಗಣನೀಯ ಹೆಚ್ಚಳ ಕಂಡಿವೆ. ಹಣ್ಣಿನ ಸೆಟ್‌ಗೆ 150ರಿಂದ 200 ರೂವರೆಗೆ ದರವಿದ್ದು, ಬೆಲೆ ಏರಿಕೆ ಗ್ರಾಹಕರನ್ನು ಚಿಂತೆಗೀಡು ಮಾಡಿದೆ.

ಸೋಮವಾರ ಅಮವಾಸ್ಯೆ, ಮಂಗಳವಾರ ದೀಪಾವಳಿ ಪಾಡ್ಯ ಆಚರಿಸಲಾಗುತ್ತಿದೆ. ಪಾಡ್ಯದ ದಿನ ವ್ಯಾಪಾರಸ್ಥರು ಅತ್ಯಂತ ವಿಜೃಂಭಣೆಯಿಂದ ಅಂಗಡಿಗಳಲ್ಲಿ ಲಕ್ಷ್ಮೀಪೂಜೆ ಮಾಡುತ್ತಾರೆ. ರೈತರ ಮನೆಗಳಲ್ಲಿ ಹಟ್ಟಿ ಹಬ್ಬದ ದಿನ ಬೆರಣಿಯಿಂದ ಏಳು ಸುತ್ತಿನ ಕೋಟೆ ನಿರ್ಮಿಸಲಾಗುತ್ತದೆ. ಹಬ್ಬದ ನಿಮಿತ್ತ ಜನತೆ ಅಂಗಡಿ- ಮನೆಗಳನ್ನು ಸ್ವಚ್ಛಗೊಳಿಸಿ, ಸುಣ್ಣ-ಬಣ್ಣ ವಿದ್ಯುತ್ ದೀಪಾಲಂಕಾರದಿಂದ ಅಲಂಕರಿಸಿ ಹಬ್ಬದ ಆಚರಣೆಗೆ ಅಣಿಯಾಗಿದ್ದಾರೆ.

ಸಾಮಾನ್ಯವಾಗಿ ದೀಪಾವಳಿ ಹಬ್ಬಕ್ಕೆ ವಸ್ತ್ರಾಭರಣ, ವಾಹನ ಇತ್ಯಾದಿ ಖರೀದಿ ಮಾಡುತ್ತಾ ಬಂದಿರುವ ಜನತೆಗೆ ಈ ವರ್ಷ ಬರಗಾಲದಿಂದಾಗಿ ಆಡಂಬರದ ಆಚರಣೆಯಿಂದ ದೂರ ಉಳಿಯುವಂತಾಗಿದೆ. ದೊಡ್ಡ ಹಬ್ಬದ ಸಂಪ್ರದಾಯ ಆಚರಿಸಲೇಬೇಕಾದ್ದರಿಂದ ಪಟ್ಟಣಕ್ಕೆ ಆಗಮಿಸುತ್ತಿರುವ ಜನರ ಮೊಗದಲ್ಲಿ ಮಂದಹಾಸ ಮರೆಯಾಗಿದೆ.

ರಾಜ್ಯ ಸರಕಾರದಿಂದ ಮಹಿಳೆಯರಿಗೆ ಉಚಿತ ಪ್ರಯಾಣದ 'ಶಕ್ತಿ' ಯೋಜನೆಯ ದೆಸೆಯಿಂದ ಪಟ್ಟಣದ ಮಾರುಕಟ್ಟೆಯಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ದೀಪಾವಳಿ ಹಬ್ಬಕ್ಕೆ ಬೇಕಾದ ಅಗತ್ಯ ವಸ್ತುಗಳ ಖರೀದಿಗೆ ಗ್ರಾಮೀಣ ಭಾಗದಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ಆಗಮಿಸುತ್ತಿದ್ದಾರೆ.

> ಮಾರುಕಟ್ಟೆಯಲ್ಲಿ ಜನಸಂದಣಿ ಕಂಡು ಬಂದರೂ ಜನರ ಕೈಯಲ್ಲಿ ದುಡ್ಡಿಲ್ಲದ್ದರಿಂದ ಅಗತ್ಯ ವಸ್ತುಗಳ ಖರೀದಿ ಪ್ರಮಾಣದಲ್ಲಿ ಅರ್ಧದಷ್ಟು ಕಡಿಮೆಯಾಗಿದ್ದು ವ್ಯಾಪಾರ ಅಷ್ಟಕಷ್ಟೇ ಆಗಿದೆ. ಬರಗಾಲ ವ್ಯಾಪಾರ-ವಹಿವಾಟಿನ ಮೇಲಷ್ಟೇ ಅಲ್ಲದೇ ಜನರ ಜೀವನದ ಮೇಲೂ ಗಂಭೀರ ಪರಿಣಾಮ ಬೀರಿದೆ.
>
> **- ಈರಯ್ಯ ಹಿರೇಮಠ.**
> ವ್ಯಾಪಾರಸ್ಥರು.

ಹಬ್ಬದ ಸಂತೆಗಾಗಿ ಬಂದಿದ್ದ ಗ್ರಾಮೀಣ ಪ್ರದೇಶದ ಮಹಿಳೆ ಶೆಟ್ಟಿಕೇರಿಯ ಲಕ್ಷ್ಮವ್ವ ಲಮಾಣಿ ಅವರನ್ನು ಮಾತನಾಡಿಸಲಾಗಿ, 'ಮುಂಗಾರು-ಹಿಂಗಾರಿನಲ್ಲೂ ಮಳೆಯಾಗದ್ದರಿಂದ ಬೆಳೆ ಒಣಗಿ ಸಾಲಗಾರರಾಗಿದ್ದೇವೆ. ಕೂಲಿ ಕೆಲಸಾನೂ ಇಲ್ರೀ, ನಮ್ಮಂತ ಬಡವರು ಜೀವನಾ ನಡಸೋದ ಕಷ್ಟಾಗೈತ್ರಿ. ಇಂತಾದ್ರಾಗ ದೊಡ್ಡ ಹಬ್ಬಾ ಬಿಡಾಕೂ ಬರಂಗಿಲ್ರೀ. ಸಾಲಸೂಲ ಮಾಡಿ ಹಬ್ಬಾ ಮಾಡಕತ್ತೇವ್ರೀ' ಎಂದರು.

### ವಿಧಿ-ವಿಧಾನಗಳೊಂದಿಗೆ

# ಲಿಂ. ಗುರುಬಸವ ಮಹಾಸ್ವಾಮಿಗಳ ಅಂತ್ಯಕ್ರಿಯೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಶಿರೋಳದ ತೋಂಟದಾರ್ಯ ಮಠದ ಪರಮ ಪೂಜ್ಯ ಶ್ರೀ ಮ.ನಿ.ಪ್ರ ಗುರುಬಸವ ಮಹಾಸ್ವಾಮಿಗಳ ಅಂತ್ಯಕ್ರಿಯೆಯನ್ನು ಭಾನುವಾರ ರಾತ್ರಿ 11:35ಕ್ಕೆ ಶ್ರೀಮಠದಲ್ಲಿ ಈ ಮೊದಲೇ ನಿರ್ಮಿಸಲಾಗಿದ್ದ ಸಮಾಧಿಯಲ್ಲಿ, ಹರ-ಗುರು-ಚರ ಮೂರ್ತಿಗಳ ಸಾನ್ನಿಧ್ಯದಲ್ಲಿ ಬಸವ ತತ್ವ ಪ್ರಕಾರ ವಚನ ಘೋಷದೊಂದಿಗೆ ನೆರವೇರಿಸಲಾಯಿತು.



ಪೂಜ್ಯಶ್ರೀ ಜಗದ್ಗುರು ಜ. ತೋಂಟದ ಸಿದ್ದರಾಮ ಮಹಾಸ್ವಾಮಿಗಳ ಆಶೀರ್ವಚನಗಳ ನಂತರ ಸಕಲ ವಿಧಿ-ವಿಧಾನಗಳನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ನರಗುಂದ ಕ್ಷೇತ್ರದ ಮಾಜಿ ಶಾಸಕರು, ಬಿಹಾರ್ ಜಿ.ಪಂ ಮಾಜಿ ಅಧ್ಯಕ್ಷ ರಾಜುಗೌಡ ಕೆಂಚನಗೌಡ್, ತಾ.ಪಂ ಮಾಜಿ ಅಧ್ಯಕ್ಷ ಪ್ರಕಾಶ್ ಗೌಡ, ಚಿಂಚಣಿ ಅಲ್ಲಮಪ್ರಭು ಸಂಸ್ಥಾಪಟ್ಟಿ ಮಠದ ಭಕ್ತಾದಿಗಳು ಹಾಗೂ ಶಿರೋಳ ಸುತ್ತಮುತ್ತಲಿನ ಗ್ರಾಮದ ತೋಂಟದಾರ್ಯ ಮಠದ ಭಕ್ತ ಸಮೂಹ ಮಂತ್ರ ಜಯ ಘೋಷಗಳೊಂದಿಗೆ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು.


ಲಿಂಗೈಕ್ಯ ಪೂಜ್ಯರ ಪ್ರಥಮ ಪುಣ್ಯಸ್ಮರಣೆಯನ್ನು ಡಿಸೆಂಬರ್ 2ರಂದು ಮಾಡಲಾಗುವುದು. ಕಾರ್ಯಕ್ರಮದಲ್ಲಿ ರಾಜ್ಯದ ಮಠಾಧೀಶರು, ಜನಪ್ರತಿನಿಧಿಗಳು, ಶ್ರೀಮಠದ ಭಕ್ತಾದಿಗಳು ಪಾಲ್ಗೊಳ್ಳುವವರು ಎಂದು ತಿಳಿಸಲಾಗಿದೆ.


## ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು




| Sl. No. | Particulars | Amount (As on 30-09-2023) |
|---|---|---|
| 1. | Number of Branhces | 1 |
| 2. | Grading of The Bank | II |
| 3. | Total No. of Members | 5625 |
| | | (Rs. in Lakhs) |
| 4. | Share Capital | 287.23 |
| 5. | Crar | 18.01% |
| 6. | Reserve And Other Funds | 665.51% |
| 7. | Deposits | 7641.26 |
| 8. | Net Profit | 71.88 |
| 9. | Cash | 15.21 |
| 10. | Bank Balances | 439.11 |
| 11. | Total Investment | 3731.30 |
| 12. | Loans Advances | 4626.98 |










ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು
ನರಕ ಚತುರ್ದಶಿಯಂದು ಎದ್ದು ಅಭ್ಯಂಗಸ್ನಾನ
ಮಾಡಿದರೆ ಒಳಿತಾಗುತ್ತದೆ ಎಂಬುದು ನಂಬಿಕೆ.
ಹಾಗೆಯೆ, ಲಕ್ಷ್ಮೀಪೂಜೆ, ಬಲಿಪಾಡ್ಯಮಿ ದಿನ
ಬಲೀಂದ್ರನ ಆರಾಧನೆಯೊಂದಿಗೆ
ಹಬ್ಬದ ಸಂಭ್ರಮ ಎಲ್ಲೆಲ್ಲೂ ಮನೆ ಮಾಡಲಿ
ಸಪ್ನಾ ಬಾರ್ & ರೆಸ್ಟೋರೆಂಟ್, ಗದಗ


ಪ್ರತಿ ಜೀವಿಗಳ ಪಾಲಿಗೂ ಕತ್ತಲೆಯನ್ನು ಅಳಿಸಿ, ಬೆಳಕನ್ನುಂಟು ಮಾಡುವ
ಜ್ಞಾನ ಜ್ಯೋತಿಯಾಗುವುದರ ಮೂಲಕ ಸುಖ-ಶಾಂತಿ-ಸಂತೋಷವನ್ನು
ಹೊತ್ತು ತರಲೆಂದು ಹಾರೈಸುವ
ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು
ಶುಭ ಕೋರುವವರು :
ಮಂಜುನಾಥ ಮೇರವಾಡೆ
ರಿಯಲ್ ಎಸ್ಟೇಟ್ ಉದ್ಯಮಿಗಳು,
ಗದಗ


ಪ್ರತಿ ಜೀವಿಗಳ ಪಾಲಿಗೂ ಕತ್ತಲೆಯನ್ನು ಅಳಿಸಿ,
ಬೆಳಕನ್ನುಂಟು ಮಾಡುವ ಜ್ಞಾನ ಜ್ಯೋತಿಯಾಗುವುದರ
ಮೂಲಕ ಸುಖ-ಶಾಂತಿ-ಸಂತೋಷವನ್ನು
ಹೊತ್ತು ತರಲೆಂದು ಹಾರೈಸುವ
ದೀಪಾವಳಿಯ ಹಾರ್ದಿಕ ಶುಭಾಶಯಗಳು
ಶ್ರೀ ಕೃಷ್ಣಗೌಡ ಎಚ್. ಪಾಟೀಲ
ಗದಗ ಜಿಲ್ಲಾ ಯುವ ಕಾಂಗ್ರೆಸ್
ಪ್ರಧಾನ ಕಾರ್ಯದರ್ಶಿಗಳು
ಶುಭ ಕೋರುವವರು :
ಸಿದ್ಧಲಿಂಗನಗೌಡ ಅಂದಾನಗೌಡ್ರು
ರಿಯಲ್ ಎಸ್ಟೇಟ್ ಉದ್ಯಮಿಗಳು, ಗದಗ


ಕರುಣಾಮಯಿ ದೇವರು
ಈ ದೀಪಾವಳಿಯ
ಶುಭ ಸಂದರ್ಭದಲ್ಲಿ ಆರೋಗ್ಯ,
ಆಯುಷ್ಯ, ಸಂತೋಷ,
ಶಾಂತಿಯನ್ನು ನಿಮಗೆ
ಆಶೀರ್ವದಿಸಲಿ
ದೀಪಾವಳಿಯ
ಹಾರ್ದಿಕ ಶುಭಾಶಯಗಳು
ಶುಭ ಕೋರುವವರು :
ಚಂದ್ರು ಕರಿಸೋಮನಗೌಡ್ರ
ಸದಸ್ಯರು, ವಾರ್ಡ ನಂ 9, ನಗರಸಭೆ, ಗದಗ-ಬೆಟಗೇರಿ


ಮುಖದಲ್ಲಿದ್ದ ನೋವು ಮರೆಯಾಗಲಿ, ಕಣ್ಣೀರಿಟ್ಟಿದ್ದ ಕಣ್ಣುಗಳಲ್ಲಿ
ಖುಷಿ ತುಂಬಲಿ, ಕಷ್ಟಗಳು ಮಂಜಿನಂತೆ ಕರಗಲಿ,
ದೀಪಗಳ ಪ್ರಭೆ ಮನೆ ತುಂಬಾ ಖುಷಿಯ ಹೂ ಚೆಲ್ಲಲಿ
ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು
ಬಿ. ಎಮ್. ನದ್ದಿಮುಲ್ಲಾ
ರಾಜ್ಯಾಧ್ಯಕ್ಷರು,
ದಿ ನ್ಯಾಶನಲ್ ರಾಜೀವ್‌ಗಾಂಧಿ ಬ್ರಿಗೇಡ್ ಕಾಂಗ್ರೆಸ್, ಕರ್ನಾಟಕ













VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka